ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	439
ಸದಸ್ಯರ ಹೆಸರು	:	ಶ್ರೀ ಆಯನೂರು ಮಂಜುನಾಥ್ (ಪದವೀಧರ ಕ್ಷೇತ್ರ)
ಉತ್ತರಿಸ ಬೇಕಾದ ದಿನಾಂಕ	:	19.07.2019
ಉತ್ತರಿಸಬೇಕಾದ ಸಚಿವರು	:	ಮಾನ್ಯ ಉಪ ಮುಖ್ಯಮಂತ್ರಿಯವರು.

ಕ್ರಮ ಸಂಖ್ಯೆ	ಪ್ರಶ್ನೆ	ಉತ್ತರ
ಅ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ನಲ್ಲಿ ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)	ಹೌದು. ಸಂಘದಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಸಹಕಾರ ಸಂಘಗಳ ನಿಬಂಧಕರು, ಸಹಕಾರ ಇಲಾಖೆ, ರವರಿಗೆ ದಿನಾಂಕ:28.05.2019 ರಂದು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಪತ್ರವನ್ನು ಬರೆದು ತನಿಖೆ ಕೈಗೊಂಡಿದ್ದಲ್ಲಿ ತನಿಖಾ ವರದಿಯನ್ನು ಸಲ್ಲಿಸುವಂತೆ ಕೋರಲಾಗಿರುತ್ತದೆ. ಮುಂದುವರೆದು, ದಿನಾಂಕ:29.06.2019 ರ ಪತ್ರದಲ್ಲಿ ಸಂಘದಲ್ಲಿನ ಅಕ್ರಮಗಳ ಬಗ್ಗೆ ತನಿಖೆ ನಡೆಸಲು ಆಡಳಿತಾಧಿಕಾರಿಯವರನ್ನು ನೇಮಿಸುವಂತೆ ಕೋರಲಾಗಿರುತ್ತದೆ. ವರದಿ ಬಂದ ನಂತರ ಸದರಿ ಸಂಘದವರ ವಿರುದ್ಧ ಕ್ರಮಕೈಗೊಳ್ಳಲಾಗುವುದು.
ಆ	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್‌ಗೆ ಭೂಮಿಯನ್ನು ಮಂಜೂರು ಮಾಡಲಾಗಿದೆಯೇ; (ವಿವರ ನೀಡುವುದು)	ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರಿಗೆ ನಿವೇಶನ ಹಂಚಿಕೆ ಮಾಡುವ ಉದ್ದೇಶಕ್ಕಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿರುತ್ತದೆ. **ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ**
ಇ	ಇಲ್ಲವಾದಲ್ಲಿ, ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ ನೌಕರರಿಗೆ ಮತ್ತು ಇತರರಿಗೆ ನಿವೇಶನ ಹಂಚಿಕೆ ಮಾಡಿರುವ ಸರ್ಕಾರಿ ಭೂಮಿ ಯಾವುದು? (ಸಂಪೂರ್ಣ ಮಾಹಿತಿ ನೀಡುವುದು)	ಬೆಂಗಳೂರು ದಕ್ಷಿಣ ತಾಲ್ಲೂಕು, ಉತ್ತರಹಳ್ಳಿ ಹೋಬಳಿ, ದೊಡ್ಡಕಲ್ಲಸಂದ್ರ ಗ್ರಾಮದ ಸರ್ವೆ ನಂ.15, 16 ಮತ್ತು 17 ಸರ್ಕಾರಿ ಗೋಮಾಳ ಜಮೀನಾಗಿದ್ದು, ಪ್ರಾಧಿಕಾರದಿಂದ ಭೂಸ್ವಾಧೀನ ಪ್ರಕ್ರಿಯೇ ಪೂರ್ಣಗೊಂಡ ನಂತರ ಒಟ್ಟು 27 ಎಕರೆ 15 ½ ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕ ತಹಶೀಲ್ದಾರ್ ರವರಿಗೆ ಭೂಪರಿಹಾರದ ಹಣ ಪಾವತಿ ಮಾಡಿರುವ ವಿವರ ಕೆಳಕಂಡಂತಿದೆ:-

ಕ್ರಮ ಸಂಖ್ಯೆ	ಸರ್ವೆ ನಂಬರ್	ಭೂಪರಿಹಾರದ ಮೊತ್ತ
1	15	16,49,442/-
2	16	8,66,916/-
3	17	36,40,279/-

		ಬೆಂಗಳೂರು ದಕ್ಷಿಣ ತಾಲ್ಲೂಕು, ಕೆಂಗೇರಿ ಹೋಬಳಿ, ಲಿಂಗಧೀರನಹಳ್ಳಿ ಗ್ರಾಮದ ಸರ್ವೆ ನಂ.6 ರ ಒಟ್ಟು 15 ಎಕರೆ 1 ಗುಂಟೆ ಜಮೀನನ್ನು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಎಂಪ್ಲಾಯೀಸ್ ವೆಲ್‌ಫೇರ್ ಅಸೋಸಿಯೇಷನ್ (ರಿ) ರವರಿಗೆ ಸಗಟು ಹಂಚಿಕೆ ಮಾಡಲಾಗಿದೆ. ಬೆಂಗಳೂರು ದಕ್ಷಿಣ ತಾಲ್ಲೂಕ ತಹಶೀಲ್ದಾರ್ ರವರಿಗೆ ಭೂಪರಿಹಾರದ ಮೊತ್ತ ರೂ.75,37,680/-ಗಳನ್ನು ಪಾವತಿ ಮಾಡಲಾಗಿದೆ.

ಸಂ: ನಅಇ 64 ಬೆಂಅಸೇ 2019

(ಡಾ॥ ಜಿ.ಪರಮೇಶ್ವರ)
ಉಪ ಮುಖ್ಯಮಂತ್ರಿ

ಅನುಬಂಧ-I

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ನೌಕರರು ಕ್ಷೇಮಾಭಿವೃದ್ಧಿ ಸಂಘಕ್ಕೆ ಸಗಟು ಹಂಚಿಕೆಯಡಿ ನೀಡಲಾಗಿರುವ ಒಟ್ಟು ಜಮೀನು ವಿವರ

ಕ್ರಮ ಸಂಖ್ಯೆ	ಸರ್ವೆ ನಂ	ಗ್ರಾಮ	ವಿಸ್ತೀರ್ಣ		ನೋಂದಣಿ ವಿವರ		ಷರಾ
			ಎಕರೆ	ಗುಂಟೆ	ಕ್ರಯಪತ್ರ ದಿನಾಂಕ	ಸ್ವಾಧೀನ ಪತ್ರ ದಿನಾಂಕ	
1	15, 16 ಮತ್ತು 17	ದೊಡ್ಡಕಲ್ಲಸಂದ್ರ	27	15 1/2	09.11.2006	09.11.2006	ವಾಸ್ತವವಾಗಿ ಸರ್ವೆ ನಂ. 15, 16 ಮತ್ತು 17 ರ ಜಮೀನು 27 ಎಕರೆ 15 1/2 ಗುಂಟೆ ಮಾತ್ರ ಎಂದು ದಿನಾಂಕ: 12.06.2013 ರಂದು ತಿದ್ದುಪಡಿ ಪತ್ರ ನೋಂದಾಯಿಸಲಾಗಿದೆ.
2	06 (ಭಾಗ)	ಲಿಂಗಧೀರನಹಳ್ಳಿ	07	00	13.06.2007	13.06.2007	
3	06 (ಭಾಗ) ಮತ್ತು 07 (ಭಾಗ)	ಲಿಂಗಧೀರನಹಳ್ಳಿ	05	00	14.11.2007	14.11.2007	
4	06 (ಭಾಗ) ಮತ್ತು 07 (ಭಾಗ)	ಲಿಂಗಧೀರನಹಳ್ಳಿ	03	01	28.06.2011	28.06.2011	
		ಒಟ್ಟು	42	16 1/2			